# ವಿವಾಹ ಶಬ್ದದ ವಿಶೇಷಾರ್ಥ

ಡಾ.ಕೆ.ಎಲ್ ಪ್ರಸನ್ನಾಕ್ಷಿ

ಈ ಶರೀರ ಒಂದು ಪಾತ್ರ. (ಪಾತ್ರ=ಪಾತನಾತ್ ತ್ರಾಣನಾಚ್ಚೈವ ಪಾತ್ರಮಿತ್ಯಭಿಧೀಯತೇ) ಪಾತ್ರೆಯ ಕೆಲಸ ಏನು? ತನ್ನೊಳಗೆ ಪದಾರ್ಥಗಳನ್ನು ಹಾಕಿಸಿಕೊಳ್ಳುವುದು, ಅವುಗಳ ಸ್ವರೂಪ ಕೆಡದಂತೆ ರಕ್ಷಿಸುವುದು. ಅಂತೆಯೆ ಈ ಶರೀರ, ತನ್ನೊಳಗೆ ಹಾಕಿದ ಜೀವವೆಂಬ (ಚೈತನ್ಯ, ಬುದ್ಧಿ, ಮನಸ್ಸು, ಅಂತಃಕರಣ ಇಂದ್ರಿಯಾದಿಗಳೊಡಗೂಡಿದ) ಪದಾರ್ಥದ ಸ್ವರೂಪ ಕೆಡದಂತೆ ಕಾಯ್ದುಕೊಳ್ಳಬೇಕು. ಪಾತ್ರೆಯ ಈ ಗುಣ ಹಾಗೆಯೇ ಇರುವಂತೆ ಮಾಡಲು ಅದನ್ನು ತೊಳೆಯುತ್ತೇವೆ. ಎಲ್ಲಾ ಪಾತ್ರೆಗಳನ್ನು ಒಂದೇ ರೀತಿ ತೊಳೆಯುತ್ತೇವೆಯೇ? ಪಾತ್ರೆಗಳ ಗುಣ, ಸ್ವಭಾವ, ಸ್ವರೂಪಗಳಿಗನುಗುಣವಾಗಿ ತೊಳೆಯುವ ಕ್ರಮ, ತೊಳೆಯಲು ಬಳಸುವ ವಸ್ತು, ತೆಗೆದುಕೊಳ್ಳುವ ಕಾಳಜಿ, ಎಲ್ಲಾ ವ್ಯತ್ಯಾಸವಾಗುವುದಲ್ಲವೆ? ಅಂತೆಯೇ ಈ ಶರೀರದ ಗುಣ, ಸ್ವಭಾವ, ರೀತಿ, ನೀತಿಗಳಿಗನುಗುಣವಾಗಿ ಅದನ್ನು ಶುದ್ಧಮಾಡುವ ಕ್ರಮವೂ ಬದಲಾಗುತ್ತದೆ. ಇದನ್ನೇ 'ಸಂಸ್ಕಾರ' ಎನ್ನುವುದು. ಶರೀರದೊಳಗಿರಿಸಿದ ಜೀವದ ಜ್ಞಾನ, ಭಾವನೆ ಇತ್ಯಾದಿಗಳು ಉತ್ಕೃಷ್ಟವಾಗಿ, ಅದರ ಸ್ವರೂಪ ಪ್ರಕರ್ಷಮಾನವಾಗಿ ಉಳಿಯುವಂತೆ ಮಾಡಲು ಸಹಕಾರಿಗಳಾಗಿವೆ ಈ ಸಂಸ್ಕಾರಗಳು. ಇವುಗಳಲ್ಲಿ ವಿವಾಹವೂ ಜೀವಕ್ಕೆ ಆಗುವ ಒಂದು ಸಂಸ್ಕಾರ ವಿಶೇಷ. ಇದು ಲೋಕದ ದೃಷ್ಟಿಯಲ್ಲಿಯ ಹೇಳಿಕೆಯಂತೆ ಬಂಧ, ಗುಲಾಮಗಿರಿ, ಲೈಸೆನ್ಸ್ ಇತ್ಯಾದಿ ಯಾವುದೂ ಅಲ್ಲ.

**ವಿವಾಹ ಪದ್ಧತಿಯ ಮೇಲೆ ಒಂದು ಹೊಸ ಬೆಳಕನ್ನು ಚೆಲ್ಲಿ, ಅದರ ಅರ್ಥಾನುಸಾರವಾಗಿ ನಡೆದುಕೊಂಡರೆ ಆಧ್ಯಾತ್ಮಿಕ ಉನ್ನತಿಗೆ ಅದು ಸಹಾಯಕವಾಗುತ್ತದೆ ಎಂಬುದನ್ನು ತೋರಿಸಿಕೊಟ್ಟಿರುವರು ಶ್ರೀಮತಿ ಪ್ರಸನ್ನಾಕ್ಷಿಯವರು.**

ವಿ+ವಾಹ (ವಹ್) ಶಬ್ದದ ಅರ್ಥ, ವಿಶಿಷ್ಟವಾದ ಉತ್ಕೃಷ್ಟವಾದ ವಹನ (ಹೊರುವ, ಕರೆದೊಯ್ಯುವ) ಕ್ರಿಯೆ ಎಂದು. ಎಲ್ಲಿಗೆ? ಯಾರನ್ನು ಕರೆದೊಯ್ಯುವುದು? ಪ್ರತಿಯೊಂದು ಮಾನವ 'ಜೀವ'ದ ಗತಿಯೂ ಊರ್ಧ್ವಮುಖವಾಗಿರುತ್ತದೆ. ಪ್ರಾಣಿಗಳಿಗಿಂತ ಮಾನವ ವಿಭಿನ್ನ ಎನ್ನುವುದು ಈ ವಿಷಯದಿಂದಲೇ. ಈ ಊರ್ಧ್ವಮುಖ ಹೊರತು ಪಡಿಸಿಕೊಂಡೇ ಇತ್ತೀಚಿನ ಬದುಕು ಸಾಗುತ್ತಿರುವುದರಿಂದ ಮಾನವ—ಮನು-ಅವಬೋಧನೇ—ಪರತತ್ತ್ವದ ಜ್ಞಾನದೊಡಗೂಡಿದ ಮಾನವನಾಗದೆ—ಚಿಂತನೆ, ಸ್ಪಂದನ, ಆಹಾರ, ವಿಹಾರ ಇತ್ಯಾದಿ ಎಲ್ಲಾ ರೀತಿಯಿಂದ ಪ್ರಾಣಿಗಳಿಗಿಂತ ಉತ್ಕೃಷ್ಟನಾಗಲಾರದವನಾಗಿದ್ದಾನೆ.

ಪ್ರಪಂಚದ, ಪ್ರಪಂಚದಲ್ಲಿರುವ ಎಲ್ಲವುಗಳ ಚಲನೆಯೂ ವೃತ್ತರೂಪವಾದುದು. ಇದು ವೈಜ್ಞಾನಿಕ ಸತ್ಯ. (*Nitrogen cycle, Carbon cycle*, ಬೀಜ-ಗಿಡ-ಮರ-ಬೀಜ ಇತ್ಯಾದಿ). ಅಂತೆಯೇ ಜೀವಿಯ ಬದುಕಿನ ಗತಿಯೂ, ಅದರ ಮೂಲದೆಡೆಗೆ ಸಾಗಬೇಕು, ಸಾಗುತ್ತದೆ, ಸಾಗುತ್ತಿದೆ ಕೂಡ. ಬುದ್ಧಿ, ವಿವೇಕ, ತರ್ಕಗಳ ಹಿನ್ನೆಲೆಯಲ್ಲಿ ಇದನ್ನು ಒಪ್ಪಬಹುದು ಒಪ್ಪದಿರಬಹುದು. ಆದರೆ ಇದು ಆತ್ಯಂತಿಕ ಸತ್ಯ. ಹಾಗೆ ತನ್ನ ಮೂಲದೆಡೆಗೆ ಜೀವಿಯ ಸಾಗುವಿಕೆಗೆ ವಾಹಕವಾಗುವುದು ಈ 'ವಿವಾಹ' ಸಂಸ್ಕಾರ.

ಈ ಸಂಸ್ಕಾರದಲ್ಲಿ, ಸ್ತ್ರೀ-ಪುರುಷ ಎರಡರ ಪಾತ್ರವಿದೆ. ಸ್ತ್ರೀಯೆನ್ನುವುದು ಸ್ತೃಞ್ ಆವರಣೇ ಎಂಬ ಧಾತುವಿನಿಂದ ಬಂದಿದೆ. ಅದು ಪದಾರ್ಥಗಳಿಗೆ ಒಂದು ಆವರಣ ಹೊದಿಸಿ, ಮರೆಮಾಡಿ, ವಿಸ್ತಾರಗೊಳ್ಳುವಂತೆ ಮಾಡುತ್ತದೆ. ಆದುದರಿಂದ ವಿಸ್ತಾರವಾಗಿ ಬೆಳೆದಿರುವ ಈ ಇಡೀ ಪ್ರಪಂಚದ ಬಾಹ್ಯರೂಪಿ—'ಪ್ರಕೃತಿ' ಎಂಬುದೇನುಂಟೋ—ಅದೆಲ್ಲಾ ಸ್ತ್ರೀ. ಅದರ ಒಳಗೆ ಚೈತನ್ಯರೂಪದಲ್ಲಿರುವುದು ಪುರುಷ. ಗಿಡ, ಮರ, ಬಳ್ಳಿ ಇತ್ಯಾದಿಗಳ ಹೊರಕವಚ ಸ್ತ್ರೀ. ಅವುಗಳೊಳಗೆ ಹರಿಯುವ ಚೈತನ್ಯರಸ—ಪುರುಷ. ಈ ಕವಚ ಅಥವಾ ಆವರಣ ಸರಿದಾಗಲೇ ಜೀವದ ನೈಜಸ್ವರೂಪದ ಅರಿವಾಗುವುದು. ಅದಕ್ಕಾಗಿಯೇ ಸತ್ಯಧರ್ಮದ ನೋಟಕ್ಕಾಗಿ, ಈ ಆವರಣವನ್ನು ಕಳಚಬೇಕೆಂದು ಮುನಿಗಳು ಮೊರೆಯಿಟ್ಟಿದ್ದಾರೆ :

ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಮ್ ।
ತತ್ತ್ವಂ ಪೂಷನ್ನಪಾವೃಣು
ಸತ್ಯಧರ್ಮಾಯ ದೃಷ್ಟಯೇ ॥
(ಈಶಾವಾಸ್ಯ ಉಪನಿಷತ್ತು, ೧೫)

ಈ ಹೊರಕವಚದ ಸಹಕಾರವಿಲ್ಲದಿದ್ದರೆ ಜೀವ ತನ್ನ ಮೂಲದೆಡೆಗೆ ಸಾಗುವುದು, ಸ್ವರೂಪಜ್ಞಾನವನ್ನು ಹೊಂದುವುದು ಎಂಬುದು ಅಸಾಧ್ಯ. ಆದುದರಿಂದಲೇ ಮೊದಲು 'ಮಾತೃದೇವೋ ಭವ'. ಇದರ ಸಹಕಾರದಿಂದಲೇ ಚೈತನ್ಯಪ್ರಭು—ಪಿತೃವಿನ ಅರಿವು. ಈ ಸ್ತ್ರೀ-ಪುರುಷ ಎರಡರ ನಡುವಿನ ಸಮನ್ವಯ ಸಮರಸದ ಅರಿವಿನೊಡಗೂಡಿದಾಗ ಮಾತ್ರ ಬಾಳು ಆಟವಾಗುತ್ತದೆ. ಸೃಷ್ಟಿಯಲ್ಲಿರುವ ಈ ಸಹಜ ಧರ್ಮವನ್ನೇ ಮಂತ್ರಗಳು ತಿಳಿಸುವುವು.

ಈ ಶರೀರ, ಹೊರರೂಪ, ಆಕೃತಿಗಳಿಂದ ಯಾವುದೇ ಇರಲಿ, ಅದು ಸ್ತ್ರೀ. ಈ ಶರೀರದಲ್ಲಿ ಸಕಲವಿಧ ಚಟುವಟಿಕೆಗಳನ್ನೂ ಬುದ್ಧಿ ಹಾಗೂ ಮನಸ್ಸಿನ ವ್ಯಾಪಾರಗಳನ್ನೂ ನಡೆಸುವ ಚೈತನ್ಯರೂಪಿ ಪುರುಷ ಈ ಪುರದಲ್ಲಿ ವಾಸಿಸುವವನು (ನವದ್ವಾರೇ ಪುರೇ ದೇಹೀ.... ಭಗವದ್ಗೀತೆ ೫.೧೩). ಆದುದರಿಂದ ಮೊದಲ ವಿವಾಹ ಆಗಬೇಕಾದುದು ನಮ್ಮ ಬಹಿರಂಗ-ಅಂತರಂಗಗಳೊಡನೆ. ಅಂತರಂಗ ಒಂದನ್ನು ಹೇಳುತ್ತಿದ್ದರೆ ಇಂದ್ರಿಯಗಳು ಮತ್ತೊಂದನ್ನು ಮಾಡುತ್ತಿರುತ್ತವೆ, ಇಲ್ಲಾ ಸೂಚಿಸುತ್ತಿರುತ್ತವೆ. ಹಾಗಾಗದೆ, ಎರಡರ ಅಭಿಪ್ರಾಯ ಒಂದೇ ಆಗಿದ್ದಾಗ ನಮ್ಮ ಬಾಳು ನಮಗೇ ಸಹನೀಯವಾಗಿ, ಆನಂದದಾಯಕವಾಗಿ, ಸುಖಪ್ರದವಾಗಿ ಇರುತ್ತದೆ.

ಇಂದ್ರಿಯ, ಬುದ್ಧಿ,ಅಂತಃಕರಣ ಹಾಗೂ ಆತ್ಮ ಇವುಗಳಲ್ಲಿ ಸಮರೇಖೆಯಿದ್ದಾಗ ಸಹಜವಾದ ಅನುಭವ, ಜ್ಞಾನ ದೊರಕುತ್ತದೆ. ಲೌಕಿಕವಾದ ಬದುಕಿನಲ್ಲೂ ಇದು ಅವಶ್ಯ. ಕಣ್ಣು ತೆರೆದುಕೊಂಡೇ ಇರುತ್ತದೆ. ಕಣ್ಣೆದುರಿಗೇ ಬೇಕಾದ ಪದಾರ್ಥವೂ ಇರುತ್ತದೆ. ಆದರೆ ಮನಸ್ಸಿನ ಅನವಧಾನತೆ, ಉದ್ವೇಗ, ಖಿನ್ನತೆ, ತ್ವರೆ ಇತ್ಯಾದಿಗಳ ಕಾರಣ (ಸಮರೇಖೆ ಇಲ್ಲದ ಕಾರಣ *contact* ಇಲ್ಲದೆ) ಅದು ಕಾಣುವುದಿಲ್ಲ. ಆದುದರಿಂದ ನಮ್ಮ ಬದುಕಿನ ಸಾಫಲ್ಯಕ್ಕೆ ಅಂತರಂಗ-ಬಹಿರಂಗಗಳ ಸಮರಸ ಅತ್ಯವಶ್ಯ. ಅದನ್ನೇ ಪಾಣಿಗ್ರಹಣ ಮಂತ್ರ ತಿಳಿಸುತ್ತದೆ :

> **ವಿವಾಹ ಆಗಬೇಕಾದುದು ನಮ್ಮ ಬಹಿರಂಗ ಅಂತರಂಗಗಳೊಡನೆ. ನಮ್ಮ ಬದುಕಿನ ಸಾಫಲ್ಯಕ್ಕೆ ಅಂತರಂಗ ಬಹಿರಂಗಗಳ ಸಮರಸ ಅತ್ಯವಶ್ಯ. ಅದನ್ನೇ ಪಾಣಿಗ್ರಹಣ ಮಂತ್ರ ತಿಳಿಸುತ್ತದೆ.**

**ಗೃಭ್ಣಾಮಿ ತೇ ಹಸ್ತಂ ಸುಪ್ರಜಾಸ್ತ್ವಾಯ**
**ಜರದಷ್ಟಿರ್ಯಥಾ ಸಃ |**
**ಭಗೋ ಅರ್ಯಮಾ ಸವಿತಾ ಪುರಂಧಿರ್ಮಹ್ಯಂ**
**ತ್ವಾದುರ್ಗಾರ್ಹಪತ್ಯಾಯ ದೇವಾಃ ||**

*(ಏಕಾಗ್ನಿ ಕಾಂಡ, ಪ್ರ.ಪಾಠಕ. ತೃ.ಖಂಡ,)*

ಮುದುಕನಿಗೆ ಊರುಗೋಲಿನ ಆಸರೆಯಂತೆ, ಅಂತರಂಗಕ್ಕೆ ಬಹಿರಂಗದ ಆಸರೆ, ಬಹಿರಂಗಕ್ಕೆ ಅಂತರಂಗದ ಆಸರೆ. **ಭಗ**–ಇಚ್ಛಾ, **ಅರ್ಯಮಾ**–ಕ್ರಿಯೆ (ಋ-ಗತೌ), **ಸವಿತಾ**–ಜ್ಞಾನ, **ಪುರಂಧಿ**–ಈ ಪುರಪಾಲಕ (ಚೈತನ್ಯ) ಇವರಿಂದ ಕೊಡಲ್ಪಟ್ಟುದು ಈ ಆಸರೆ. ಪ್ರಕೃಷ್ಟ ವಾದ ಜ್ಞಾನದ ನಿರಂತರತೆ ಪ್ರಜಾ. (ವೇದ ಮಂತ್ರಗಳಿಗೆ ಯಜ್ಞ, ದೇವತೆ, ಅಧ್ಯಾತ್ಮದೃಷ್ಟಿಗಳಿಂದ ವಿಭಿನ್ನ ಅರ್ಥವುಂಟು. ಈ ಅರ್ಥಗಳೂ ಪರಸ್ಪರ ಸಂಬದ್ಧವಾದವುಗಳೇ.)

**ಸೋಮೋ ದದದ್ಗಂಧರ್ವಾಯ ಗಂಧರ್ವೋ ದದದಗ್ನಯೇ |**
**ರಯಿಂಚ ಪುತ್ರಾಂಶ್ಚಾದಾದಗ್ನಿರ್ಮಹ್ಯಮಥೋ ಇಮಾಮ್||**

*(ಏಕಾಗ್ನಿ ಕಾಂಡ ಪ್ರ.ಪ್ರಪಾಠಕ. ತೃ. ಖಂಡ,)*

**ಸೋಮ**–ಮನಃ (ಸಂಕಲ್ಪ), **ಗಂಧರ್ವ**–ಇಂದ್ರಿಯ, **ಅಗ್ನಿ**–ತೇಜೋರೂಪಿ ಚೈತನ್ಯ. ಈ ಮೂರರ ಸಮ್ಮತಿಯೊಡನೆ ನಡೆಯುವುದು ಪ್ರಪಂಚದ ಹಾಗು ನಮ್ಮ ಬದುಕಿನ ಕ್ರಿಯಾ ವಿಕಾಸಗಳು. (ಒಬ್ಬನೆ ಇದ್ದ ಭಗವಂತ 'ಬಹುಸ್ಯಾಂ ಪ್ರಜಾಯೇಯಂ' ಎಂದು ಮಾಡಿದ ಸಂಕಲ್ಪವೇ ಸೃಷ್ಟಿವಿಕಾಸ ಅಲ್ಲವೇ? ) ಇವುಗಳು ಯಾಂತ್ರಿಕವಾಗಿ ನಡೆದು ಹೋಗುತ್ತಿರುವುದರಿಂದ, ಅವುಗಳ ಕುರಿತು ಚಿಂತನ ಮನನಗಳು ಇಲ್ಲದ ಕಾರಣ ಈ ವಿಚಾರ ಅರಿವಿಗೇ ಬರದೆ ನಡೆಯುತ್ತಿವೆ. ಒಂದು ಪುಸ್ತಕ ನಾವು ಕೊಂಡುಕೊಳ್ಳಬೇಕಾದರೆ, ಪುಸ್ತಕದ ಕುರಿತು ಅವರಿವರಿಂದ ಕೇಳಿಯೋ, ಎಲ್ಲಾದರೂ ಓದಿಯೋ ತಿಳಿದುಕೊಂಡಿರಬೇಕು. ಅದನ್ನು ಪಡೆದುಕೊಳ್ಳುವ ಇಚ್ಛೆ ಬೇಕು. ಅನಂತರ ಅದಕ್ಕೆ ತಕ್ಕ ಪ್ರಯತ್ನ –ಎಲ್ಲಿ ಸಿಗುತ್ತದೆ? ಬೆಲೆ ಏನು? ಇತ್ಯಾದಿ. ಹೀಗೇ ಪ್ರತಿ ದಿನದ ಎಲ್ಲಾ ಕ್ರಿಯೆಗಳೂ ಜ್ಞಾನ, ಇಚ್ಛೆ, ಪ್ರಯತ್ನಗಳಿಂದಲೇ ನಡೆಯುತ್ತಿವೆ.

**ಸಾತ್ವಮಸ್ಯಮೂಹಮಮೂಹಮಸ್ಮಿ ಸಾತ್ವಂ| ದ್ಯೌರಹಂ ಪೃಥಿವೀ ತ್ವಂ| ರೇತೋಽಹಂ (ಜ್ಞಾನ) ರೇತೋಭೃತ್ತ್ವಂ (ಶರೀರ)|| ಮನೋಽಹಮಸ್ಮಿ ವಾಕ್‌ತ್ವಂ | ಸಾಮಾಹ ಮಸ್ಮ್ಯೃಕ್ ತ್ವಂ (ಕ್ರಿಯೆ) ಸಾಮಾ ಮನು ವ್ರತಾ ಭವ...**(ಏಕಾಗ್ನಿ ಕಾಂಡ. ಪ್ರ. ಪ್ರಪಾಠಕ. ತೃ. ಖಂಡ)

ಕಣ್ಣಿಗೆ ಕಾಣದ ಅನಿರ್ದಿಷ್ಟ ರೂಪ ನೀನು. (ಸೃಷ್ಟಿ ಇಷ್ಟೇ ಮತ್ತು ಇಂತಹುದೇ ರೂಪವುಳ್ಳದ್ದು ಎಂದು ನಿರ್ದಿಷ್ಟವಾಗಿ ಹೇಳುವುದು ಅಶಕ್ಯ.ಅದರ ವಿಕಾಸಗೊಂಡ ಸ್ವರೂಪಕ್ಕೆ ಪಾರವೇ ಇಲ್ಲ). ಸ್ಪಷ್ಟ, ನಿರ್ದಿಷ್ಟ ಆಕಾರ ಇರುವವ ನಾನು. ಚೈತನ್ಯ ಎಲ್ಲಿದ್ದರೂ ಒಂದೇ ಜ್ಯೋತಿರೂಪ. **ದ್ಯೌಃ** = ಸಕಲಕ್ಕೂ ಆಶ್ರಯಭೂತವಾದುದು ನಾನು, ಸೀಮಿತ ಪರಿಧಿ, ಅವಧಿವುಳ್ಳದ್ದು ನೀನು. ಎಲ್ಲವನ್ನೂ ಒಳಗಡಗಿಸಿಕೊಂಡು ಉಳಿಸಿ ಬೆಳೆಸುವ (ರತ್ನಗರ್ಭಾ ವಸುಂಧರಾ) ತತ್ತ್ವ ಪೃಥಿವೀ. ಅದು ನೀನು. ಮನಸ್ಸು–ಸಂಕಲ್ಪಕೇಂದ್ರ ನಾನು, ವಾಕ್ ಕ್ರಿಯಾರೂಪ ನೀನು. **ಸಾಮ** = ಜ್ಞಾನಪ್ರಧಾನವಾದುದು (ನಾನು) **ಋಕ್** = ಯಜ್ಞ ಕ್ರಿಯಾ ಪ್ರಧಾನವಾದುದು ನೀನು.

ಈ ಮೇಲಿನ ಎಲ್ಲಾ ಜೋಡಿಗಳ ಸಾಮರಸ್ಯದಿಂದಲೇ ಪ್ರಪಂಚ ಸಾಗುತ್ತಿರುವುದು ಗಮನಾರ್ಹ ಮತ್ತು ಈ ಎರಡರಲ್ಲಿ ಒಂದು ಅಂತರ್ಭೂತವಾದುದು, ಇನ್ನೊಂದು ಬಹಿರ್ಭೂತವಾದುದು. ಹೀಗೆ ಅಂತರಂಗ ಬಹಿರಂಗಗಳಲ್ಲಿ ಸಮರಸತೆ ಉಂಟಾದ ಮೇಲೆ ಬದುಕಿನ ಎಲ್ಲಾ ಹಂತಗಳ ನಡೆಯೂ ಉತ್ತಮವಾಗಿ, ಶಾಂತಿ ಸುಭದ್ರತೆಗಳನ್ನು ತಂದುಕೊಡುವವಾಗಿ ಆಗೇ ಆಗುತ್ತವೆ. ಇದನ್ನೇ **ಸಪ್ತಪದೀ** ಮಂತ್ರ ತಿಳಿಸುತ್ತದೆ :

**ಏಕಮಿಷೇ ವಿಷ್ಣುಸ್ತ್ವಾನ್ವೇತು | ದ್ವೇ ಊರ್ಜೇ| ತ್ರೀಣಿ ವ್ರತಾಯ|**
**ಚತ್ವಾರಿ ಮಾಯೋ ಭವಾಯ | ಪಂಚ ಪಶುಭ್ಯಃ | ಷಡೃತುಭ್ಯಃ|**
**ಸಪ್ತಸಪ್ತಭ್ಯೋ ಹೋತ್ರಭ್ಯೋ ವಿಷ್ಣುಸ್ತ್ವಾನ್ವೇತು|**

*(ಏಕಾಗ್ನಿ ಕಾಂಡ. ಪ್ರ.ಪ್ರಪಾಠಕ.ತೃ.ಖಂಡ,)*

**ವಿಷ್ಣು** ಎನ್ನುವುದು ಎಲ್ಲೆಡೆ ವ್ಯಾಪಿಸಿರುವ ಸ್ಥಿತಿಕಾರಕ ತತ್ತ್ವ. ನಮ್ಮೆಲ್ಲರ ಹಾಗೂ ಲೋಕದ ಉಳಿವಿಗೆ ಅತ್ಯವಶ್ಯವಾದುದು. ಅದು ಯಾವಾಗಲೂ ಜೊತೆಯಲ್ಲಿ ಇರಬೇಕು. ಮೊದಲನೆಯದು **ಇಷ** = ಅನ್ನ. ಪ್ರಪಂಚವೆಲ್ಲ ಅನ್ನವೇ. ಅದರ ಹೊರತು ಬೇರೆ ಯಾವುದೂ ಇಲ್ಲ. ಒಂದು ಒಂದಕ್ಕೆ ಅನ್ನ. ಒಂದನ್ನು ತಿಂದುಕೊಂಡು ಒಂದು ಬದುಕುತ್ತದೆ. ಇಡೀ ಲೋಕದ ಒಳ ಹೊರ ರೂಪ ಅನ್ನ. **ಅದ್ಯತೇ ಅತ್ತಿ ಚ ಭೂತಾನಿ | ತಸ್ಮಾದನ್ನಂ ತದುಚ್ಯತ ಇತಿ |** ಎಂದು **ತೈತ್ತಿರೀಯ ಉಪನಿಷತ್ತು** ಅನ್ನದ ಸ್ವರೂಪವನ್ನು ತಿಳಿಸುತ್ತದೆ. **ಊರ್ಜ** = ಬಲ. ಅನ್ನದಿಂದ ಪುಷ್ಟಿ. **ವ್ರತ** = ಜೀವನದಲ್ಲಿ ಸಾಧಿಸಬೇಕೆಂದು ಹಾಕಿಕೊಳ್ಳುವ ಯೋಜನೆಗಳು, ಸಂಕಲ್ಪಗಳು.

ಮಾಯೋ ಭವ = ಅವುಗಳ ಫಲರೂಪ ಸುಖಾನುಭವ, ಪಶು = ಲೌಕಿಕ ಸಂಪತ್ತು, ಋತು = ನಿಯತವಾದ ಕಾಲದಲ್ಲಿ ಇರಬೇಕಾದ ನಿರ್ದಿಷ್ಟ ನಡೆ. ಹೋತೃ = ಯಜ್ಞದೀಕ್ಷಿತ. ನಮ್ಮ ಬದುಕೇ ಒಂದು ಯಜ್ಞ. ಆ ಯಜ್ಞದಲ್ಲಿ ತಂದೆ, ತಾಯಿ, ಹಿರಿಯರಿಗೆ ಕೃತಜ್ಞತೆ ಸಲ್ಲಿಸುವ ಪಿತೃಯಜ್ಞ, ಭೂಮಿಯಿಂದ ನಾವು ಪಡೆಯುವ ಸಕಲ ಸವಲತ್ತುಗಳಿಗೆ ಸಲ್ಲಿಸುವ ಕೃತಜ್ಞತಾರೂಪವಾದ ಭೂಯಜ್ಞ, ಸಮಾಜದಲ್ಲಿ ಅಕ್ಕಪಕ್ಕದವರು, ಒಡನಾಡಿಗಳು, ಸಹೋದ್ಯೋಗಿ, ಸಹಪಾಠಿ ಇತ್ಯಾದಿಗಳಿಂದ ಪಡೆದ ಸಹಕಾರಕ್ಕೆ ಸಲ್ಲಿಸುವ ಕೃತಜ್ಞತಾರೂಪ ನೃಯಜ್ಞ, ಅಪ್, ತೇಜೋ, ವಾಯು ಆಕಾಶಾದಿಗಳ ಸಹಕಾರಕ್ಕೆ ಸಲ್ಲಿಸುವ ಭೂತಯಜ್ಞ, ಇತ್ಯಾದಿ ರೂಪದಲ್ಲಿ ನಾವು ಸಮಾಜದೊಡನೆ ಹೊಂದಿರುವ ಸಮರಸತೆ, ದೃಷ್ಟಿ ರಕ್ಷಣೆಯ ದಾಯಿತ್ವ ಇತ್ಯಾದಿ. ಈ ಏಳು ಹಂತಗಳು, ಈ ಹೆಜ್ಜೆಗಳು ಐಹಿಕ ಪಾರಮಾರ್ಥಿಕ ಶ್ರೇಯಃ ಪ್ರೇಯಸ್ಸುಗಳನ್ನುಂಟುಮಾಡುವಂತಹವು.

> **ವಿವಾಹವೆಂದರೆ ಕೇವಲ ಎರಡು ಜೀವಿಗಳ ಸಂಗಮವಲ್ಲ— ಅದು ಎರಡು ಚೇತನಗಳ ಸಂಗಮ. ಈ ವಿವಾಹ ಬಂಧನದ ಉದ್ದೇಶ ಇಬ್ಬರ ಸ್ವಭಾವದ ಪರಿಪೂರ್ಣತೆ.**
>
> *—ಎಫ್. ಡಬ್ಲ್ಯು. ರಾಬರ್ಟ್‌ಸನ್.*

ಹೀಗೆ ಪರಸ್ಪರ ಸೌಮನಸ್ಯ ಹೊಂದಿ ಹೆಜ್ಜೆಯಿರಿಸಿದಾಗ ಬದುಕಿನಲ್ಲಿ ಬಂದುದನ್ನು ಯಾವ ಏರು ಪೇರುಗಳಿಲ್ಲದೆ, ದ್ವಂದ್ವಾದಿ ಭಾವಗಳಿಗೆ ಸಿಲುಕದೆ ಸಮತ್ವದ ನೆಲೆಯಲ್ಲಿ ನಿಂತು ಅನುಭವಿಸಲು ಸಾಧ್ಯ. ಆಗ ಮಾತ್ರ ಸಖಿತ್ವವುಂಟಾಗುತ್ತದೆ. ಹೀಗೆ ಉಂಟಾದ ಸಖಿತ್ವ ಸದಾಕಾಲಕ್ಕೆ ರಕ್ಷಿತವಾಗಬೇಕು. ಅದಕ್ಕೆ ಪ್ರತಿಜ್ಞೆ— **ಸಖಾ ಸಪ್ತಪದಾಭವ | ಸಖಾಯೌ ಸಪ್ತಪದಾ ಬಭೂವ|ಸಖ್ಯಂ ತೇಗಮೇಯಂ| ಸಖ್ಯಾತ್ತೇ ಮಾಯೋಷಂ | ಸಖ್ಯಾನ್ಮೇ ಮಾಯೋಷ್ಠಾ | ಸಮಯಾವಹೈ| ಸಂಕಲ್ಪಾವಹೈ | ಸಂಪ್ರಿಯೌರೋಚಿಷ್ಣು ಸುಮನಸ್ಯಮಾನೌ ||**

*(ಏಕಾಗ್ನಿ ಕಾಂಡ. ಪ್ರ. ಪ್ರಪಾಠಕ. ತೃ. ಖಂಡ,)*

ಸಖಿನಾದ ನಾನು ನಿನ್ನ ಸಖ್ಯವನ್ನು ಹೊಂದಿದ್ದೇನೆ. ನಿನ್ನ ಸಖ್ಯವನ್ನು ನಾನು ಬಿಡುವುದಿಲ್ಲ. ನನ್ನ ಸಖ್ಯವನ್ನು ನೀನು ಬಿಡಬೇಡ. ಹೀಗೆ ಪ್ರತಿಜ್ಞೆ ಮಾಡಿ, ಸಂಕಲ್ಪ ಮಾಡಿ, ಸೌಮನಸ್ಯದಿಂದ ಕೂಡಿ ಬದುಕೋಣ. ಹೀಗೆ ಅಂತರಂಗ ಬಹಿರಂಗಗಳ ಸರಿಯಾದ, ಲಗತ್ತಾದ ಜೋಡಣೆ ಹೊಂದಿಕೆಯಿಂದಲೇ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ. ಇದು ಎಲ್ಲರ ಅನುಭವದಲ್ಲಿರುವ ವಿಚಾರ.

ಅಂತೆಯೇ ಅಶ್ಮಪ್ರತಿಷ್ಠಾಪನ, ಲಾಜಾಹೋಮ ಇತ್ಯಾದಿ ಮಂತ್ರಗಳೂ ಮನಸ್ಸು ವಿಕಾರ, ವಿಕ್ಲವಗಳಿಗೆ ಒಳಗಾಗುವಂತಹ ಕಾರಣಗಳಿದ್ದಾಗ್ಯೂ, ವಿಚಲಿತವಾಗದಂತೆ ಮಾಡಿ ಸ್ಥೈರ್ಯ, ಧೈರ್ಯ, ಸಾಮರ್ಥ್ಯಗಳನ್ನು ನಮ್ಮ ಒಳ-ಹೊರಗೆ ತುಂಬುವಂತವಾಗಿವೆ.

ನನ್ನ ಶರೀರ, ಮನೆ, ಬಡಾವಣೆ, ದಕ್ಷಿಣ, ಮೈಸೂರು, ಕರ್ನಾಟಕ, ಭಾರತ, ಏಶಿಯಾ, ವಿಶ್ವ –ಹೀಗೆ ದ್ವಾರಗಳನ್ನು ತೆಗೆದು ಮುಂದೆ ಮುಂದೆ ಚಲಿಸಿದಂತೆ ವೈಶಾಲ್ಯದ, ಅಗಾಧತೆಯ ಅರಿವಾಗುವುದು ಹೇಗೆ ಸಹಜವೋ, ಹಾಗೆಯೇ ಈ ಮಂತ್ರಗಳ ಅರ್ಥವೂ ಒಂದೊಂದು ಹೊದಿಕೆ ಬಿಚ್ಚುತ್ತಾ ಹೋದಂತೆ ವಿಸ್ತಾರವಾಗುತ್ತಾ ಹೋಗುತ್ತದೆ. ಮಂತ್ರಗಳ ಅರ್ಥ ಇಂತಿಷ್ಟೇ ಎಂದು ಹೇಳಿ ಕೈ ಒದರಿಕೊಳ್ಳಲಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಮೇಲಿನ ಮಂತ್ರಗಳು ಹೊರರೂಪದ ಪುರುಷ-ಸ್ತ್ರೀ ಸಂಬಂಧಕ್ಕೂ ಅನ್ವಯಿಸುತ್ತವೆ. ಮೊದಲು ಬಹಿರಂಗ-ಅಂತರಂಗಗಳ ಸಮನ್ವಯ ಮಾಡಿಕೊಂಡು, ವ್ಯಕ್ತಿಯಲ್ಲಿ ಸೌಮನಸ್ಯ ಉಂಟಾಗಿ, ಹೊರಲೋಕದಲ್ಲೂ ಪುರುಷ-ಸ್ತ್ರೀಯರು ಸೌಮನಸ್ಯವನ್ನು ಪಡೆದು, ಪೂರಕ-ಪೋಷಕಗಳಾಗಿ ನಡೆದು, ಆನಂದ ನೆಮ್ಮದಿ ಭದ್ರತೆಯಿಂದ ಕೂಡಿದ ಬಾಳಾಟ ನಡೆಸಬೇಕೆಂಬುದು ವೈವಾಹಿಕ ಮಂತ್ರಗಳ ತತ್ತ್ವ. ಹಾಗಾದಾಗ ಅದು ನಮ್ಮನ್ನು ಊರ್ಧ್ವಮನಸ್ಕರನ್ನಾಗಿ ಮಾಡುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ, ಸಂಶಯವೂ ಇಲ್ಲ.

---

ಗುರುಗೃಹದಲ್ಲಿ ವಾಸಮಾಡಿ ಅಧ್ಯಯನ ಮುಗಿಸಿದ ಮೇಲೆ ಗುರುವು ಶಿಷ್ಯನನ್ನು ಮನೆಗೆ ಕಳಿಸುತ್ತಿದ್ದನು— ಅಲ್ಲಿ ಪ್ರಾಪಂಚಿಕತೆಯಲ್ಲಿ ಸಿಕ್ಕಿಕೊಳ್ಳುವನೆ ಅಥವಾ ಸಂನ್ಯಾಸದ ಕಡೆ ಮನಸ್ಸು ವಾಲುವುದೇ ಎಂದು ನೋಡುವುದಕ್ಕೆ. ತಮ್ಮ ತಮ್ಮ ಮನೆಗಳಲ್ಲಿ ಕೆಲವು ಕಾಲ ವಾಸಿಸಿದ ಮೇಲೆ ಹುಡುಗರು ಪ್ರಾಪಂಚಿಕ ಆಸೆಗಳನ್ನೆಲ್ಲ ತೊರೆದು ಕಾಶಿಗೆ ಯಾತ್ರೆ ಹೊರಡುತ್ತಿದ್ದರು. ಆಗ ವಧುವಿನ ತಂದೆ ತಾಯಿಯರು ಬಂದು ಅವರನ್ನು ತಡೆದು ತಮ್ಮ ಮಗಳನ್ನು ವಿವಾಹವಾಗಬೇಕೆಂದು ಕೇಳಿಕೊಳ್ಳುವರು. ತೀವ್ರ ವೈರಾಗ್ಯ ಮನೋಭಾವವುಳ್ಳವರು ವಿವಾಹವನ್ನು ಲೆಕ್ಕಿಸದೆ ಹೊರಟುಹೋಗುತ್ತಿದ್ದರು. ಹಾಗಿಲ್ಲದವರು ಮದುವೆಗೆ ಒಪ್ಪಿ ಹಿಂದಿರುಗುತ್ತಿದ್ದರು. ಈಗ ಅದೆಲ್ಲ ಮರೆತೇಹೋಗಿದೆ. ಈಗ ವರನು ಯಾತ್ರೆಗೆ ಹೋಗುವ ವಿಧಾನವೇ ಬೇರೆ. ಅವನು ಜರತಾರಿ ರೇಶ್ಮೆಪಂಚೆ ಉಟ್ಟುಕೊಂಡು ಕಣ್ಣಿಗೆ ಕಾಡಿಗೆ ಹಾಕಿಕೊಂಡು, ಹಣೆಗೆ ಜಾತಿಯ ಅಂಕಿತವನ್ನಿಟ್ಟುಕೊಂಡು, ಪಾದಕ್ಕೆ ಹಳದಿ ಕುಂಕುಮ ಬಳಿದುಕೊಂಡು, ದೇಹಕ್ಕೆಲ್ಲ ಗಂಧ ಹಚ್ಚಿಕೊಂಡು, ಕುತ್ತಿಗೆಗೆ ಹೂಮಾಲೆ ಹಾಕಿಕೊಂಡು, ಕೊಡೆ ಹಿಡಿದುಕೊಂಡು ಠೀವಿಯಿಂದ ಹೋಗುತ್ತಾನೆ. ಹಿಂದೆ ವಾದ್ಯಮೇಳ ಹೊರಡುತ್ತದೆ. ವಧುವಿನ ಸಹೋದರ ಬಂದು ತನ್ನ ಸಹೋದರಿಯ ಕೈ ಹಿಡಿಯಬೇಕೆಂದು ತೀವ್ರ ಕಳಕಳಿಯಿಂದ ಕೇಳಿಕೊಳ್ಳುತ್ತಾನೆ. ಆಗ ವರನು, 'ನನಗೆ ರಿಸ್ಟ್ ವಾಚ್ ಬೇಕು, ನನಗೆ ಕಾರು ಬೇಕು, ಅದು ಬೇಕು, ಇದು ಬೇಕು. ಇಲ್ಲದಿದ್ದರೆ ಮದುವೆಯಾಗುವುದಿಲ್ಲ' ಎನ್ನುತ್ತಾನೆ. ಆಗಲೇ ಅಣಿಯಾಗಿರುವ ವಿವಾಹ ಕಾರ್ಯ ಎಲ್ಲಿ ನಿಂತುಹೋಗುವುದೊ ಎಂಬ ಭಯದಿಂದ ವಧುವಿನ ತಂದೆ ತಾಯಿಯರು ಅವನು ಕೇಳಿದ್ದನ್ನೆಲ್ಲ ಕೊಡಲು ಒಪ್ಪುವರು. ಅನಂತರ ಫೋಟೊ, (ವೀಡಿಯೊ) ದೊಡ್ಡ ಸಂತರ್ಪಣೆ, ವಿಧವಿಧದ ಉಡುಗೊರೆ ಇವೆಲ್ಲ ಇರುತ್ತವೆ. ಈಗ ಭಿಕ್ಷೆಯೆಂದರೆ ಜೋಳಿಗೆಯನ್ನು ಹಣದಿಂದ ತುಂಬುವುದಾಗಿದೆ. ಕಾಶಿಯಾತ್ರೆ ವರದಕ್ಷಿಣೆ ಸುಲಿಯುವ ಉಪಾಯವಾಗಿದೆ.

—ಶ್ರೀರಮಣ ಮಹರ್ಷಿ [*Letters from Sri Ramanashramam*, p.211-212.]